ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ: ಎಸಿ7(a)/182/2020-21

ದಿನಾಂಕ: 06-03-2021

## ಸುತ್ತೋಲೆ

ವಿಷಯ: 2020-21 ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಪ್ರೋಗ್ರಾಂಗಳಿಗೆ ವಿಶ್ವವಿದ್ಯಾನಿಲಯದ ಕೋಟಾದಡಿ ಸೀಟು ಹಂಚಿಗೆ ಮಾಡಿರುವ ವಿದ್ಯಾರ್ಥಿಗಳ ಶುಲ್ಕಗಳನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸುವ ಬಗ್ಗೆ.

ಉಲ್ಲೇಖ: 1. ಪರಿಷ್ಕೃತ ಅಧಿಸೂಚನೆ ಸಂಖ್ಯೆ: ಎಸಿ2(ಎಸ್)/363/2020-21 ದಿನಾಂಕ: 01.09.2020.
2. ಈ ಕಛೇರಿ ಇದೆ ಸಮ ಸಂಖ್ಯೆ ಸುತ್ತೋಲೆ ದಿನಾಂಕ: 25.02.2021.

****

2020-21ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಕೋಟಾದಡಿ ಸರ್ಕಾರಿ/ಸಂಯೋಜಿತ/ಸ್ವಾಯತ್ತ ಕಾಲೇಜುಗಳಿಗೆ Admission portal ಮುಖಾಂತರ ಈಗಾಗಲೇ ಸೀಟು ಹಂಚಿಕೆ ಮಾಡಲಾಗಿರುತ್ತದೆ. ಸೀಟು ಹಂಚಿಕೆ ಮಾಡುವಾಗ ಪ್ರತಿ ವಿದ್ಯಾರ್ಥಿಯಿಂದ Admission portal ಮುಖಾಂತರ ರೂ.5,000/-ಗಳನ್ನು ಸೀಟು ಖಾತ್ರಿಪಡಿಸುವ ಸಂಬಂಧ ಪ್ರವೇಶಾತಿ ಶುಲ್ಕವನ್ನು ಪಡೆಯಲಾಗಿರುತ್ತದೆ. (2.50ಲಕ್ಷ ಆದಾಯ ಮಿತಿಯೊಳಗಿನ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಯಾವ ಯಾವ ಕಾಲೇಜಿಗೆ ಸೀಟುಗಳನ್ನು ಹಂಚಿಕೆ ಮಾಡಲಾಗಿದೆಯೋ ಅ ಕಾಲೇಜಿನವರು ಈ ಕೆಳಕಂಡ ಕ್ರಮಗಳನ್ನು ಅನುಸರಿಸುವಂತೆ ತಿಳಿಸಲಾಗಿದೆ.

1. ಆಯಾ ಕಾಲೇಜುಗಳು ನಿಗಧಿಪಡಿಸಿರುವ ಶುಲ್ಕವನ್ನು ವಿದ್ಯಾರ್ಥಿಗಳ ಸೀಟು ಹಂಚಿಕೆ ಸಮಯದಲ್ಲಿ Admission portal ಮುಖಾಂತರ ಪಾವತಿಸಿರುವ ರೂ.5,000/-ಗಳನ್ನು ಹೊರತುಪಡಿಸಿ, ಉಳಿಕೆ ಶುಲ್ಕವನ್ನು ಹಂಚಿಕೆಯಾದ ವಿದ್ಯಾರ್ಥಿಯಿಂದ ಪಾವತಿಸಿಕೊಳ್ಳುವುದು.
2. ಸರ್ಕಾರಿ ಕಾಲೇಜುಗಳು ವಿಶ್ವವಿದ್ಯಾನಿಲಯಕ್ಕೆ ಪ್ರತಿ ವಿದ್ಯಾರ್ಥಿಯಿಂದ ರೂ 3,990/- (ಪ್ರಥಮ ವರ್ಷಕ್ಕೆ) ರೂ. 2,190/-(ಎರಡನೆ ವರ್ಷಕ್ಕೆ)ಗಳನ್ನು ಪಾವತಿಸಬೇಕಿರುತ್ತದೆ. ಸೀಟು ಹಂಚಿಕೆ ಸಮಯದಲ್ಲಿ ಎಷ್ಟು ವಿದ್ಯಾರ್ಥಿಗಳ ಹಂಚಿಕೆ ಮಾಡಲಾಗಿದೆ, ಎಷ್ಟು ಶುಲ್ಕ ಪಾವತಿಸಿರುತ್ತಾರೆಂದು ಲೆಕ್ಕ ಹಾಕಿ ಸದರಿ ಹಣವನ್ನು ಮುರಿದುಕೊಂಡು ವಿಶ್ವವಿದ್ಯಾನಿಯಲಕ್ಕೆ ಪಾವತಿಸಬೇಕಿರುವ ಬಾಕಿ ಶುಲ್ಕದ ಬಗ್ಗೆ ಹೊಂದಾಣಿಕೆ ಪಟ್ಟಿ ಸಿದ್ಧಪಡಿಸಿ, ಅದರಂತೆ ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ (ಈ ಕಛೇರಿ ಇದೆ ಸಮ ಸಂಖ್ಯೆ ಸುತ್ತೋಲೆ ದಿನಾಂಕ: 25.02.2021 ರಂತೆ) ಸಂಬಂಧಿಸಿದ ಖಾತೆಗಳಿಗೆ ಜಮಾ ಮಾಡಿ, ಚಲನ್‌ನ್ನು ಪ್ರವೇಶಾತಿ ಅನುಮೋದನಾ ಸಮಯದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು.
3. ಸ್ವಾಯತ್ತ ಮತ್ತು ಸಂಯೋಜಿತ(ಖಾಸಗಿ) ಕಾಲೇಜುಗಳು ಸಹ ಉಲ್ಲೇಖ(1) ರಲ್ಲಿ ನಿಗಧಿಪಡಿಸಿರುವ ಶುಲ್ಕವನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಲು ತಿಳಿಸಲಾಗಿದೆ.

ಮೇಲಿನ ಕ್ರಮ ಸಂಖ್ಯೆ 2 ಮತ್ತು 3 ರಂತೆ ಸಿದ್ಧಪಡಿಸಿದ ಹೊಂದಣಿಕೆ ಪಟ್ಟಿಯನ್ನು ಹಣಕಾಸು ಅಧಿಕಾರಿಗಳು ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ರವರಿಗೆ ಪ್ರತಿ ಕಳುಹಿಸಲು ತಿಳಿಸಿದೆ.

ಕುಲಸಚಿವರಿಂದ ಕರಡು ಅನುಮೋದಿಸಿದೆ.

06/3
ಉಪ ಕುಲಸಚಿವ(ಶೈಕ್ಷಣಿಕ)
ಉಪ ಕುಲಸಚಿವರು (ಶೈಕ್ಷಣಿಕ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

ಇವರಿಗೆ.

1. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ನಡೆಸುತ್ತಿರುವ ಎಲ್ಲಾ ಸರ್ಕಾರಿ/ಖಾಸಗಿ/ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಪ್ರಾಂಶುಪಾಲರು, ಶ್ರೀ. ಶಂಭುಲಿಂಗೇಶ್ವರ ದೈಹಿಕ ಶಿಕ್ಷಣ ಮಹಾವಿದ್ಯಾಲಯ, ಬಿ.ಪಿ.ಇಡಿ ಕಾಲೇಜು ಕ್ಯಾಂಪಸ್, ಜಯಂತಿನಗರ, ಕೆ.ಆರ್.ಪೇಟೆ, ಪಾಂಡವಪುರ, ಮಂಡ್ಯ ಜಿಲ್ಲೆ.
3. ಪ್ರಾಂಶುಪಾಲರು, ಬಿ.ಜಿ.ಎಸ್. ದೈಹಿಕ ಶಿಕ್ಷಣ ಮಹಾವಿದ್ಯಾಲಯ, ಬಿ.ಜಿ.ನಗರ, ಶ್ರೀ ಆದಿಚುಂಚನಗರಿ ಕ್ಷೇತ್ರ-571448, ನಾಗಮಂಗಲ ತಾ., ಮಂಡ್ಯ ಜಿಲ್ಲೆ.
4. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಮಾನ್ಯ ಕುಲಪತಿ/ ಕುಲಸಚಿವ/ ಕುಲಸಚಿವ(ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳು ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಕಛೇರಿ ಪ್ರತಿ.